**Akashvani : Bangalore**
**National Bulletin In Kannada**
**28.08.2024 / 7.35 am**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**28.08.2024 7.35 am**

**<><*<><>*><>**

ಮುಖ್ಯಾಂಶಗಳು

**<><*<><>*><>**

**೧. ಇಂದು ಪೊಲೀಸ್ ಸಂಶೋಧನೆ ಮತ್ತು ಅಭಿವೃದ್ಧಿ ಮಂಡಳಿಯ ೫೪ನೇ ಸಂಸ್ಥಾಪನಾ ದಿನಾಚರಣೆ; ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗಿ**

**೨. ೨೦೩೦ರ ವೇಳೆಗೆ ವಾರ್ಷಿಕ ೫ ದಶಲಕ್ಷ ಮೆಟ್ರಿಕ್ ಟನ್ ಹಸಿರು ಜಲಜನಕ ಉತ್ಪಾದನಾ ಗುರಿ - ಸಚಿವ ಪ್ರಲ್ಹಾದ್ ಜೋಶಿ**

**೩. ಮುಂಗಾರು ಬೆಳೆ ಬಿತ್ತನೆಯಲ್ಲಿ ದೇಶವು ಗಮನಾರ್ಹ ಸಾಧನೆ- ಈವರೆಗೆ ೧ ಸಾವಿರದ ೬೫ ಲಕ್ಷ ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ಬಿತ್ತನೆ**

**೪. ನವದೆಹಲಿಯಲ್ಲಿಂದು ೨ನೇ ಭಾರತ-ಚಿಲಿ ಜಂಟಿ ಆಯೋಗದ ಸಭೆ; ಸಚಿವ ಡಾ.ಎಸ್.ಜೈಶಂಕರ್-ಆಲ್ಬರ್ಟೋ ವ್ಯಾನ್ ಕ್ಲಾವೆರೆನ್ ಸಹ ಅಧ್ಯಕ್ಷತೆ**

**೫. ಅಂತಾರಾಷ್ಟ್ರೀಯ ಕ್ರಿಕೆಟ್ ನಿಯಂತ್ರಣ ಮಂಡಳಿ-ಐಸಿಸಿ, ಅಧ್ಯಕ್ಷರಾಗಿ ಜೈ ಶಾ ಅವಿರೋಧ ಆಯ್ಕೆ**

**<><*<><>*><>**

ನವದೆಹಲಿಯಲ್ಲಿಂದು ನಡೆಯಲಿರುವ ಪೊಲೀಸ್ ಸಂಶೋಧನೆ ಮತ್ತು ಅಭಿವೃದ್ಧಿ ಮಂಡಳಿಯ ೫೪ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಗೃಹ ಸಚಿವರು "ಹೊಸ ಕ್ರಿಮಿನಲ್ ಕಾನೂನು - ನಾಗರಿಕ-ಕೇಂದ್ರಿತ ಸುಧಾರಣೆಗಳು" ಕುರಿತು ಡಾ.ಆನಂದ ಸ್ವರೂಪ್ ಗುಪ್ತಾ ಸ್ಮಾರಕ ಉಪನ್ಯಾಸ ನೀಡಲಿದ್ದಾರೆ. ೨೦೨೩ ಮತ್ತು ೨೦೨೪ರ ವಿಶೇಷ ಸೇವೆಗಾಗಿ ರಾಷ್ಟ್ರಪತಿಗಳ ಪದಕ ಮತ್ತು ಪ್ರತಿಭಾನ್ವಿತ ಸೇವೆಗಾಗಿ ರಾಷ್ಟ್ರಪತಿಗಳ ಪದಕ ಪಡೆದವರನ್ನು ಇದೇ ವೇಳೆ ಸನ್ಮಾನಿಸಲಿರುವ ಅಮಿತ್ ಶಾ, ಮಂಡಳಿ ಪ್ರಕಟಣೆಯ ಇಂಡಿಯನ್ ಪೊಲೀಸ್ ಜರ್ನಲ್, ಹೊಸ ಕ್ರಿಮಿನಲ್ ಕಾನೂನುಗಳ ವಿಶೇಷ ಆವೃತ್ತಿಗಳನ್ನು ಸಹ ಬಿಡುಗಡೆ ಮಾಡಲಿದ್ದಾರೆ. ಸಂಶೋಧನೆ ಮತ್ತು ಅಭಿವೃದ್ಧಿಯ ಮೂಲಕ ಪೋಲೀಸಿಂಗ್ ವ್ಯವಸ್ಥೆಯಲ್ಲಿ ಉತ್ಕೃಷ್ಟತೆ ಬೆಳೆಸಲು ಪೊಲೀಸರ ಚಿಂತಕರ ಚಾವಡಿಯು ಕಾರ್ಯನಿರ್ವಹಿಸುತ್ತದೆ. ಪೋಲೀಸ್ ಮತ್ತು ಸುಧಾರಣಾ ಸೇವೆಗಳಿಗೆ ನೀತಿಗಳು ಹಾಗೂ ಕಾರ್ಯವಿಧಾನ ಅಭಿವೃದ್ಧಿಪಡಿಸುವುದು, ನಾಗರಿಕರಿಗೆ ವರ್ಧಿತ ಸೇವೆಯ ವಿತರಣೆಗಾಗಿ ತಂತ್ರಜ್ಞಾನಗಳನ್ನು ಅನ್ವೇಷಿಸುವುದು, ಕಾನೂನು ಜಾರಿ ಸಂಸ್ಥೆಗಳ ಸಾಮರ್ಥ್ಯ ನಿರ್ಮಿಸುವುದು ಹಾಗೂ ರಾಜ್ಯಗಳು ಮತ್ತು ಕೇಂದ್ರ ಪೊಲೀಸ್ ಸಂಸ್ಥೆಗಳ ನಡುವೆ ಸಹಕಾರ ಮತ್ತು ಸಮನ್ವಯತೆ ಉತ್ತೇಜಿಸುವುದು ಈ ಮಂಡಳಿಯ ಉದ್ದೇಶವಾಗಿದೆ.

**<><*<><>*><>**

೨೦೩೦ರ ವೇಳೆಗೆ ವಾರ್ಷಿಕ ೫ ದಶಲಕ್ಷ ಮೆಟ್ರಿಕ್ ಟನ್ ಹಸಿರು ಜಲಜನಕ ಉತ್ಪಾದನಾ ಗುರಿ ಹೊಂದಿದ್ದು, ೨೦೪೭ರ ವೇಳೆಗೆ ಈ ಪ್ರಮಾಣ ೨೫ ದಶಲಕ್ಷ ಮೆಟ್ರಿಕ್ ಟನ್ ಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ಕೇಂದ್ರ ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ್ ಜೋಶಿ ದೆಹಲಿಯಲ್ಲಿ ನಿನ್ನೆ  ತಿಳಿಸಿದ್ದಾರೆ. ಮಿಂಟ್ ಸುಸ್ಥಿರತೆ ಶೃಂಗಸಭೆ ೩ನೇ ಅವೃತ್ತಿಯಲ್ಲಿ ಭಾಗಿಯಾಗಿದ್ದ ಅವರು, ಪ್ರಧಾನಮಂತ್ರಿ ಸೂರ್ಯಘರ್ ಯೋಜನೆಗೆ ದೇಶದಲ್ಲಿ ಅಭೂತ ಪೂರ್ವ ಬೆಂಬಲ ದೊರೆಯುತ್ತಿದೆ. ಈ ಯೋಜನೆಯಡಿ ೧ ಕೋಟಿ ಮನೆಗಳಿಗೆ ಮಾಸಿಕ ೩೦೦ ಯೂನಿಟ್‌ವರೆಗೆ ಉಚಿತ ವಿದ್ಯುತ್ ಒದಗಿಸುವ ಗುರಿ ಹೊಂದಲಾಗಿದೆ. ಜೊತೆಗೆ  ಪ್ರಧಾನಮಂತ್ರಿ ಕುಸುಮ್ ಯೋಜನೆ ಮೂಲಕವೂ ರೈತರಿಗೆ ಸೌರಶಕ್ತಿ  ಪಂಪ್ ಸೆಟ್‌ಗಳಿಗಾಗಿ ಸಹಾಯಧನ ಒದಗಿಸಲಾಗುತ್ತಿದೆ ಎಂದರು. ಸರ್ಕಾರ  ನವೀಕರಿಸಬಹುದಾದ ಇಂಧನ ಮೂಲಗಳನ್ನು ಉತ್ತೇಜಿಸಲು ಹೆಚ್ಚಿನ ಆದ್ಯತೆ ನೀಡಿದ್ದು, ಹಸಿರು ಇಂಧನ ಬಳಕೆಯಲ್ಲಿ ಭಾರತ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಂದಿಗೆ ಸಾಗುತ್ತಿದೆ. ಸೌರ ಘಟಕ ಉತ್ತೇಜಿಸಲು ೨೪ ಸಾವಿರ ಕೋಟಿ ರೂಪಾಯಿ  ಹೂಡಿಕೆ  ಮಾಡಲಾಗುತ್ತಿದೆ.  ಇದರಿಂದ ೧೩ ಸಾವಿರ ಮೆಗಾವ್ಯಾಟ್ ನವೀಕರಿಸಬಹುದಾದ  ಇಂಧನ  ೯ ಸಾವಿರ ಮೆಗಾವ್ಯಾಟ್ ಸೌರಶಕ್ತಿ , ೪ ಸಾವಿರ ಮೆಗಾ ವ್ಯಾಟ್  ಪವನ ಶಕ್ತಿ ಜೊತೆಗೆ ಲಡಾಖ್ ನಲ್ಲಿ ೧೨ ಸಾವಿರ ಮೆಗಾ ವ್ಯಾಟ್  ಬ್ಯಾಟರಿ ಆಧಾರಿತ  ವಿದ್ಯುತ್ ಉತ್ಪಾದನೆಗೆ ಒತ್ತು ನೀಡಲಾಗಿದೆ ಎಂದು ಹೇಳಿದರು.

<><*<><>*><>

ಈ ವರ್ಷ ಮುಂಗಾರು ಬೆಳೆ ಬಿತ್ತನೆಯಲ್ಲಿ ದೇಶವು ಗಮನಾರ್ಹ ಪ್ರಗತಿಯನ್ನು ಸಾಧಿಸಿದ್ದು, ಈವರೆಗೆ ೧ ಸಾವಿರದ ೬೫ ಲಕ್ಷ ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ಬಿತ್ತನೆಯಾಗಿದೆ.  ಕಳೆದ ವರ್ಷ ಇದೇ ಅವಧಿಯಲ್ಲಿ ಸುಮಾರು ೧ ಸಾವರಿದ ೪೪ ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮುಂಗಾರು ಬೆಳೆಗಳ ಬಿತ್ತನೆಯಾಗಿತ್ತು. ಕೃಷಿ ಮತ್ತು ರೈತರ ಕಲ್ಯಾಣ ಇಲಾಖೆಯು ಮುಂಗಾರು ಬೆಳೆಗಳ ಬಿತ್ತನೆ ಪ್ರದೇಶದ ಪ್ರಗತಿ ವರದಿಯನ್ನು ನಿನ್ನೆ ಬಿಡುಗಡೆ ಮಾಡಿದೆ. ಭತ್ತದ ಬಿತ್ತನೆ ಪ್ರದೇಶ ೩೯೪ ಲಕ್ಷ ಹೆಕ್ಟೇರ್‌ಗೆ ತಲುಪಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ಇದು ೩೭೮ ಲಕ್ಷ ಹೆಕ್ಟೇರ್‌ಗಿಂತಲೂ ಅಧಿಕವಾಗಿತ್ತು. ದ್ವಿದಳ ಧಾನ್ಯಗಳ ಬೇಸಾಯವೂ ೧೧೫ ಲಕ್ಷ ಹೆಕ್ಟೇರ್‌ನಿಂದ ೧೨೨ ಲಕ್ಷ ಹೆಕ್ಟೇರ್‌ಗೆ ಏರಿಕೆಯಾಗಿದೆ. ಬೇಳೆಕಾಳುಗಳನ್ನು ೧೮೫.೫೧ ಲಕ್ಷ ಹೆಕ್ಟೇರ್‌ಗಳಲ್ಲಿ ಬಿತ್ತನೆ ಮಾಡಲಾಗಿದ್ದು, ಎಣ್ಣೆಕಾಳುಗಳನ್ನು ೧೮೮.೩೭ ಲಕ್ಷ ಹೆಕ್ಟೇರ್‌ಗಳಲ್ಲಿ ಬಿತ್ತನೆ ಮಾಡಲಾಗಿದೆ.

<><*<><>*><>

ಚಿಲಿಯ ವಿದೇಶಾಂಗ ವ್ಯವಹಾರಗಳ ಸಚಿವ ಆಲ್ಬರ್ಟೋ ವ್ಯಾನ್ ಕ್ಲಾವೆರೆನ್ ಕಳೆದ ರಾತ್ರಿ ನವದೆಹಲಿಗೆ ಆಗಮಿಸಿದ್ದಾರೆ. ವಿದೇಶಾಂಗ ಸಚಿವ ಡಾ.ಎಸ್. ಜೈಶಂಕರ್ ಮತ್ತು ಚಿಲಿಯ ವಿದೇಶಾಂಗ ವ್ಯವಹಾರಗಳ ಸಚಿವರು ಇಂದು ನವದೆಹಲಿಯಲ್ಲಿ ೨ ನೇ ಭಾರತ-ಚಿಲಿ ಜಂಟಿ ಆಯೋಗದ ಸಭೆಯ ಸಹ-ಅಧ್ಯಕ್ಷತೆ ವಹಿಸಲಿದ್ದಾರೆ. ಅಲ್ಲದೆ, ಸಚಿವ ಕ್ಲಾವೆರೆನ್ ಅವರು ಇಂದು ಚಿಲಿ-ಭಾರತ ವ್ಯಾಪಾರ ಶೃಂಗಸಭೆಯಲ್ಲಿ ಭಾಗವಹಿಸುತ್ತಾರೆ ನಂತರ ಮುಂಬೈಗೆ ತೆರಳಲಿದ್ದಾರೆ.  ಲ್ಯಾಟಿನ್ ಅಮೇರಿಕಾ ಪ್ರದೇಶದಲ್ಲಿ ಚಿಲಿ ಭಾರತದ ಪ್ರಮುಖ ಪಾಲುದಾರ. ಸಚಿವ ಕ್ಲಾವೆರೆನ್ ಅವರ ಈ ಭೇಟಿಯು ದ್ವಿಪಕ್ಷೀಯ ಸಂಬಂಧಗಳಲ್ಲಿನ ಪ್ರಗತಿಯನ್ನು ಪರಿಶೀಲಿಸಲು ಮತ್ತು ಸಹಕಾರಕ್ಕಾಗಿ ಹೊಸ ಮಾರ್ಗಗಳನ್ನು ಅನ್ವೇಷಿಸಲು ಎರಡೂ ದೇಶಗಳಿಗೆ ಅವಕಾಶವನ್ನು ಒದಗಿಸುತ್ತದೆ, ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಬಲವರ್ಧನೆಗೊಳಿಸುತ್ತದೆ.

<><*<><>*><>

ಪ್ರಧಾನಿ ನರೇಂದ್ರ ಮೋದಿ ಅವರು ನಿನ್ನೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗೆ ದೂರವಾಣಿ ಮೂಲಕ ಸಮಾಲೋಚನೆ ನಡೆಸಿದರು ಮತ್ತು ರಷ್ಯಾ-ಉಕ್ರೇನ್ ಸಂಘರ್ಷದ ಸಂಭಾವ್ಯ ಆಯಾಮಗಳ ಕುರಿತು ವಿಚಾರ ವಿನಿಮಯ ಮಾಡಿಕೊಂಡರು. ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ನರೇಂದ್ರ ಮೋದಿ ಅವರು ಪುಟಿನ್ ಅವರೊಂದಿಗೆ ಮಾತನಾಡಿದೆ. ವಿಶೇಷವಾದ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ಕ್ರಮಗಳ ಬಗ್ಗೆ ಚರ್ಚಿಸಿದ್ದೇನೆ ಎಂದು ಹೇಳಿದ್ದಾರೆ. ಇತ್ತೀಚಿನ ಉಕ್ರೇನ್ ಭೇಟಿ ಕುರಿತು ತಮ್ಮ ಒಳನೋಟಗಳನ್ನು ಹಂಚಿಕೊಂಡಿದ್ದೇನೆ  ಎಂದು ಪ್ರಧಾನಿ ಹೇಳಿದರು. ಸಂಘರ್ಷವನ್ನು ಅಂತ್ಯಗೊಳಿಸಲು ಸ್ಥಿರ ಮತ್ತು ಶಾಂತಿಯುತ ಪರಿಹಾರವನ್ನು ಬೆಂಬಲಿಸುವ ಭಾರತದ ದೃಢವಾದ ಬದ್ಧತೆಯನ್ನು ಪ್ರಧಾನಿ ಅವರು ಪುನರುಚ್ಚರಿಸಿದರು.

<><*<><>*><>

ದೇಶ ಈ ವರ್ಷ ಈವರೆಗೆ ಒಟ್ಟಾರೆ ಕಲ್ಲಿದ್ದಲು ಉತ್ಪಾದನೆಯಲ್ಲಿ ಶೇಕಡ ೭.೧೨ ರಷ್ಟು ಗಮನಾರ್ಹ ಬೆಳವಣಿಗೆಯನ್ನು ದಾಖಲಿಸಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ೩೪೬ ಮಿಲಿಯನ್ ಟನ್‌ಗಳಿಗೆ ಹೋಲಿಸಿದರೆ ಈ ಹಣಕಾಸು ವರ್ಷದಲ್ಲಿ ಆಗಸ್ಟ್ ೧೫ ರವೇಳೆಗೆ ಒಟ್ಟು ಕಲ್ಲಿದ್ದಲು ಉತ್ಪಾದನೆಯು ೩೭೦ ಮಿಲಿಯನ್ ಟನ್‌ಗಳಿಗೆ ಹೆಚ್ಚಾಗಿದೆ ಎಂದು ಕಲ್ಲಿದ್ದಲು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. ಒಟ್ಟಾರೆ ಕಲ್ಲಿದ್ದಲು ರವಾನೆಯು ಗಣನೀಯ ಏರಿಕೆಯನ್ನು ಕಂಡಿದೆ, ಇದು ೩೯೭ ಮಿಲಿಯನ್ ಟನ್‌ಗಳನ್ನು ತಲುಪಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಇದು ಶ್ಲಾಘನೀಯ ಬೆಳವಣಿಗೆ ದರ ಶೇ.೫.೪೮ರಷ್ಟನ್ನು ಪ್ರತಿನಿಧಿಸುತ್ತದೆ ಎಂದು ಸಚಿವಾಲಯ ತಿಳಿಸಿದೆ. ಗಣಿಗಳಲ್ಲಿ, ಶಾಖೋತ್ಪನ್ನ ವಿದ್ಯುತ್ ಘಟಕಗಳು ಮತ್ತು ಸಾರಿಗೆಯಲ್ಲಿ ಒಟ್ಟಾರೆ ಕಲ್ಲಿದ್ದಲು ದಾಸ್ತಾನು ಈ ವರ್ಷ ೧೨೧.೫೭ ಮಿಲಿಯನ್ ಟನ್‌ಗಳನ್ನು ತಲುಪಿದೆ. ಇದು ೩೬ ಪ್ರತಿಶತದಷ್ಟು ಗಣನೀಯ ಏರಿಕೆಯನ್ನು ಪ್ರತಿನಿಧಿಸುತ್ತದೆ.

<><*<><>*><>

ನವದೆಹಲಿಯಲ್ಲಿ ನಿನ್ನೆ ರಾಷ್ಟ್ರೀಯ ತಾಂತ್ರಿಕ ಜವಳಿ ಮಿಷನ್ ಅಡಿಯಲ್ಲಿ ನಡೆದ ಎಂಟನೇ ಉನ್ನತಾಧಿಕಾರಿ ಸಮಿತಿ ಸಭೆಯಲ್ಲಿ ಜವಳಿ ಸಚಿವಾಲಯವು ತಲಾ ಸುಮಾರು ಐವತ್ತು ಲಕ್ಷ ರೂಪಾಯಿ ಮೊತ್ತದ ಅನುದಾನದೊಂದಿಗೆ ನಾಲ್ಕು ಸ್ಟಾರ್ಟ್‌ಅಪ್‌ಗಳ ಆರಂಭಕ್ಕೆ ಅನುಮೋದಿಸಿದೆ. ಈ ಸ್ಟಾರ್ಟ್‌ಅಪ್‌ಗಳು ಸಂಯುಕ್ತಗಳು, ಸುಸ್ಥಿರ ಜವಳಿ ಮತ್ತು ಸ್ಮಾರ್ಟ್ ಟೆಕ್ಸ್‌ಟೈಲ್‌ಗಳ ಪ್ರಮುಖ ಕಾರ್ಯತಂತ್ರದ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಅಲ್ಲದೆ, ಸಮಿತಿಯು ತಾಂತ್ರಿಕ ಜವಳಿಗಳಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ಸಕ್ರಿಯಗೊಳಿಸಲು ಸಾಮಾನ್ಯ ಮಾರ್ಗಸೂಚಿಗಳಡಿಯಲ್ಲಿ ತಾಂತ್ರಿಕ ಜವಳಿ ಕೋರ್ಸ್‌ಗಳನ್ನು ಪರಿಚಯಿಸಲು ಐದು ಶಿಕ್ಷಣ ಸಂಸ್ಥೆಗಳಿಗೆ ಅಂದಾಜು ಇಪ್ಪತ್ತು ಕೋಟಿ ರೂಪಾಯಿಗಳ ಅನುದಾನವನ್ನು ಅನುಮೋದಿಸಿದೆ. ಅನುಮೋದಿತ ಸಂಸ್ಥೆಗಳು ಜಿಯೋಟೆಕ್ಸ್ಟೈಲ್ಸ್, ಜಿಯೋಸಿಂಥೆಟಿಕ್ಸ್, ಕಾಂಪೋಸಿಟ್ಸ್, ಸಿವಿಲ್ ಸ್ಟ್ರಕ್ಚರ್ಸ್ ಇತ್ಯಾದಿ ಸೇರಿದಂತೆ ತಾಂತ್ರಿಕ ಜವಳಿಗಳ ವಿವಿಧ ಕ್ಷೇತ್ರಗಳಲ್ಲಿ ಹೊಸ ಬಿ.ಟೆಕ್ ಕೋರ್ಸ್‌ಗಳನ್ನು ಆರಂಭಿಸಲು ಪ್ರಸ್ತಾಪಿಸಿವೆ.

<><*<><>*><>

ವಕ್ಫ್ ತಿದ್ದುಪಡಿ ಮಸೂದೆ ೨೦೨೪ರ ಸಂಸತ್ತಿನ ಜಂಟಿ ಸಮಿತಿಯು ಸಾರ್ವಜನಿಕರು, ಸರಕಾರೇತರ ಸಂಸ್ಥೆಗಳು, ತಜ್ಞರು, ಪಾಲುದಾರರು ಮತ್ತು ಸಂಸ್ಥೆಗಳಿಂದ ಅಭಿಪ್ರಾಯಗಳು ಮತ್ತು ಸಲಹೆಗಳನ್ನು ಆಹ್ವಾನಿಸಿದೆ. ಈ ಸಂಬಂಧ ಲೋಕಸಭಾ ಸಚಿವಾಲಯ ಪತ್ರಿಕಾ ಪ್ರಕಟಣೆ ಹೊರಡಿಸಿದೆ. ಸಮಿತಿಗೆ ಲಿಖಿತ ಸಲಹೆಗಳನ್ನು ಸಲ್ಲಿಸಲು ಬಯಸುವವರು ಎರಡು ಪ್ರತಿಗಳನ್ನು ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಜಂಟಿ ಕಾರ್ಯದರ್ಶಿ (ಜೆಎಂ), ಲೋಕಸಭಾ

ಸಚಿವಾಲಯ, ಕೊಠಡಿ ಸಂಖ್ಯೆ ೪೪೦, ಸಂಸತ್ ಭವನದ ಅನೆಕ್ಸ್, ನವದೆಹಲಿ- ೧೧೦೦೦೧ ಮತ್ತು ಇಮೇಲ್ ವಿಳಾಸ jpcwaqf-lss@sansad.nic.in. ಗೆ ಕಳುಹಿಸಬಹುದು ಎಂದು ತಿಳಿಸಲಾಗಿದೆ. ಜಾಹೀರಾತು ಪ್ರಕಟಣೆಯ ದಿನಾಕದಿಂದ ೧೫ ದಿನಗಳಲ್ಲಿ ಸಲಹೆಗಳು ತಲುಪಬೇಕು.

**<><*<><>*><>**

ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ- ಬಿಸಿಸಿಐ, ಕಾರ್ಯದರ್ಶಿ ಜೈ ಶಾ ಅಂತಾರಾಷ್ಟ್ರೀಯ ಕ್ರಿಕೆಟ್ ನಿಯಂತ್ರಣ ಮಂಡಳಿ-ಐಸಿಸಿ,ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅವರು ಈ ವರ್ಷದ ಡಿಸೆಂಬರ್ ೧ರಂದು ಐಸಿಸಿ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಲಿದ್ದಾರೆ. ೨೦೧೯ರಿಂದ ಬಿಸಿಸಿಐ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಜೈ ಶಾ ೨೦೨೧ರಿಂದ ಏಷ್ಯಾ ಕ್ರಿಕೆಟ್ ಮಂಡಳಿಯ ಮುಖ್ಯಸ್ಥರ ಹುದ್ದೆ ನಿರ್ವಹಿಸುತ್ತಿದ್ದಾರೆ. ಐಸಿಸಿಯ ಹಾಲಿ ಅಧ್ಯಕ್ಷ ಗ್ರೇಗ್ ಬಾಕ್ಲೆ ಅವರು, ಮೂರನೇ ಬಾರಿಗೆ ಅಧ್ಯಕ್ಷರಾಗಲು ನಿರಾಕರಿಸಿದ ಹಿನ್ನೆಲೆಯಲ್ಲಿ ಜೈ ಶಾ ಒಬ್ಬರೇ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದರು. ಹೀಗಾಗಿ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಐಸಿಸಿ ಅಧ್ಯಕ್ಷರಾಗಿ ಜೈ ಶಾ ಆಯ್ಕೆಯಾಗಿದ್ದು, ೫ನೇ ಭಾರತೀಯ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇದಕ್ಕೂ ಮುನ್ನ ಜಗ್ ಮೋಹನ್ ದಾಲ್ಮಿಯಾ ಅವರು ೧೯೯೭ರಿಂದ ೨೦೦೦, ಶರದ್ ಪವಾರ್ ೨೦೧೦ ರಿಂದ ೨೦೧೨, ಎನ್. ಶ್ರೀನಿವಾಸನ್ ೨೦೧೪ ರಿಂದ ೨೦೧೫, ಶಶಾಂಕ್ ಮನೋಹರ್ ೨೦೧೫ ರಿಂದ ೨೦೨೦, ಇದೀಗ ಜೈ ಶಾ ೨೦೨೪ರ ಡಿಸೆಂಬರ್ ನಿಂದ ಅಧಿಕಾರ ಸ್ವೀಕರಿಸಲಿದ್ದಾರೆ.

**<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>**

**<><*<> ನಮ್ಮ ಮುಂದಿನ ವಾರ್ತಾ ಪ್ರಸಾರ ಅಪರಾಹ್ನ ೧.೧೦ ಕ್ಕೆ <>*><>**